# ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹಾಗೂ ಹೆಚ್ಚುವರಿ ಎಂ.ಎ.ಸಿ.ಟಿ., ಹರಿಹರ.

ಉಪಸ್ಥಿತರುಃ- **ಶ್ರೀ ವೈ. ಕೆ. ಬೇನಾಳ**, ಬಿ.ಎ., ಎಲ್.ಎಲ್.ಬಿ., (ಆನರ್ಸ),
ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
ಹರಿಹರ.

ದಿನಾಂಕ 21 ನೇ ಮೇ- 2020

## ಎಮ್.ವಿ.ಸಿ.ನಂ.25 & 695/2016

**ಎಮ್.ವಿ.ಸಿ.ನಂ.25/2016ಃ-**

ಅರ್ಜಿದಾರರು:- ಶ್ರೀ ರಮೇಶ ನಾಯ್ಕ ಮತ್ತು ಇತರರು

ವಿರುದ್ಧ

ಎದುರುದಾರರು:- ಶಿವರಾಜು ಬಿ ಎಸ್ ಮತ್ತು ಇತರರು

**ಎಮ್.ವಿ.ಸಿ.ನಂ.695/2016ಃ-**

ಅರ್ಜಿದಾರರು:- ಕರಿಬಸಪ್ಪ ಐರಣಿ

ವಿರುದ್ಧ

ಎದುರುದಾರರು:- ಶಿವರಾಜು ಬಿ ಎಸ್ ಮತ್ತು ಇತರರು

## ಮಧ್ಯಂತರ ಅರ್ಜಿ ಸಂಖ್ಯೆ-8 ಮತ್ತು 9

ಅರ್ಜಿದಾರ ಎರಡು ಪ್ರಕರಣಗಳಲ್ಲಿ:-

ಶಿವರಾಜು ಬಿ ಎಸ್ ತಂದೆ ಬಿ ಷಣ್ಮುಖಪ್ಪ,
ವಯಸ್ಕರು, ಕೆ.ಎ -17/ಬಿ -7999 ನೇ ಚಾಲಕ ಮತ್ತು ಮಾಲಕರು,

ಪ್ರೊಪರೈಟರ್ ಶ್ರೀ ಮನೋಜ್ ಟ್ರಾನ್ಸ್ಪೋರ್ಟ ನಂ.152/1,
ಹೈವೇ ಹೋಟೆಲ್ ಹಿಂಭಾಗ, ಪಿ.ಬಿ.ರೋಡ್, ದಾವಣಗರೆ.

(ಅರ್ಜಿದಾರನ ಪರ ವಕೀಲರು - ಶ್ರೀ ಎಮ್.ಕೆ)

ವಿರುದ್ಧ

**ಎಮ್.ವಿ.ಸಿ.ನಂ.25/2016ಃ-**

ಎದುರುದಾರರುಃ-

1) ಶ್ರೀ ರಮೇಶ ನಾಯ್ಕ ತಂದೆ ರಾಮಾನಾಯ್ಕ,
ವಯಸ್ಸು ಸುಮಾರು 34 ವರ್ಷ,

2) ರಚಿತರಾಜು ತಂದೆ ರಮೇಶ ನಾಯ್ಕ,
ವಯಸ್ಸು 8 ವರ್ಷ,

3) ದೀಷಿತರಾಜ ತಂದೆ ರಮೇಶ ನಾಯ್ಕ,
ವಯಸ್ಸು 6 ವರ್ಷ,

ಎದುರುದಾರ ನಂ.2 ಮತ್ತು 3 ರವರು ಅಲ್ಪವಯಸ್ಕರಾಗಿದ್ದು
ಎದುರುದಾರ ನಂ.1 ರವರು ತಂದೆಯಾಗಿದ್ದು ಅವರ ಸಂರಕ್ಷಕರಾಗಿದ್ದು,
ಅವರ ಪರ ಪ್ರತಿನಿಧಿಸುತ್ತಾರೆ,
ಎದುರುದಾರ ನಂ.1 ರಿಂದ 3 ರವರ
ವಾಸಃ ಪಟೇಲ್ ನಗರ, ರೈಲ್ವೆ ರನ್ನಿಂಗ ರೊಂ ಹತ್ತಿರ,
ಹರಿಹರ, ದಾವಣಗರೆ ಜಿಲ್ಲೆ.

4. ಮ್ಯಾನಜರ್ ದಿ ಯುನೈಟೆಡ್ ಇಂಡಿಯಾ ಇನ್ಸೂರನ್ಸ ಕಂ.ಲಿ.,
ನಂ.273/1-12, 1ನೇ ಮಹಡಿ, ಮಲ್ಲಿಕಾರ್ಜುನ ಟವರ್ಸ್, ಪ್ರವಾಸಿ
ಮಂದಿರ ರೋಡ್, ದಾವಣಗರೆ -577002,

5. ಅಬ್ದುಲ್ ರಜಾಕ್, ತಂದೆ ಜಲೀಲ್ ಸಾಬ್,

ವಯಸ್ಸು 34 ವರ್ಷ, ಲಾರಿ ಚಾಲಕ,
ವಾಸಃ ಕರ್ತಾಳ್ ತಿಮ್ಮಪ್ಪನ ಹಳ್ಳಿ, ಐನಹಳ್ಳಿ,
ಚಿತ್ರದುರ್ಗ ತಾಲ್ಲೂಕ್, ಚಿತ್ರದುರ್ಗ ಜಿಲ್ಲೆ.

(1 ರಿಂದ 3 ನೇ ಎದುರುದಾರರ ಪರ ವಕೀಲರು - ಶ್ರೀ ಎಸ್.ಡಿ.ಬಿ)
(4 ನೇ ಎದುರುದಾರರ ಪರ ವಕೀಲರು - ಶ್ರೀ ಪಿ.ಕೆ.ಎಸ್)
(5 ನೇ ಎದುರುದಾರರ ಪರ ವಕೀಲರು - ಶ್ರೀ ಹೆಚ್.ಸಿ.ಎಸ್)

**ಎಮ್.ವಿ.ಸಿ.ನಂ.695/2016ಃ-**

ಎದುರುದಾರರುಃ-

1. ಕರಿಬಸಪ್ಪ ಐರಣಿ ತಂದೆ ಲೇಟ್ ಚಿದಾನಂದಪ್ಪ,
ವಯಸ್ಸು ಸುಮಾರು 29 ವರ್ಷ,
ವಾಸಃ ಡಿಪ್ಪೋ ಸರ್ಕಲ್ ಗುತ್ತೂರು ಗ್ರಾಮ,
ಹರಿಹರ ತಾಲ್ಲೂಕು, ದಾವಣಗೆರೆ.

2. ಮ್ಯಾನಜರ್ ದಿ ಯುನೈಟೆಡ್ ಇಂಡಿಯಾ ಇನ್ಸೂರನ್ಸ ಕಂ.ಲಿ.,
ನಂ.273/1-12, 1 ನೇ ಮಹಡಿ, ಮಲ್ಲಿಕಾರ್ಜುನ ಟವರ್ ್ಸ, ಪ್ರವಾಸಿ
ಮಂದಿರ ರೋಡ್, ದಾವಣಗರೆ -577002,

3. ಅಬ್ದುಲ್ ರಜಾಕ್, ತಂದೆ ಜಲೀಲ್ ಸಾಬ್,
ವಯಸ್ಸು 34 ವರ್ಷ, ಲಾರಿ ಚಾಲಕ,
ವಾಸಃ ಕರ್ತಾಳ್ ತಿಮ್ಮಪ್ಪನ ಹಳ್ಳಿ, ಐನಹಳ್ಳಿ,
ಚಿತ್ರದುರ್ಗ ತಾಲ್ಲೂಕ್, ಚಿತ್ರದುರ್ಗ ಜಿಲ್ಲೆ.

(1 ನೇ ಎದುರುದಾರರ ಪರ ವಕೀಲರು - ಶ್ರೀ ಎಸ್.ಡಿ.ಬಿ)
(2 ನೇ ಎದುರುದಾರರ ಪರ ವಕೀಲರು - ಶ್ರೀ ಪಿ.ಕೆ.ಎಸ್)
(3 ನೇ ಎದುರುದಾರರ ಪರ ವಕೀಲರು - ಶ್ರೀ ಹೆಚ್.ಸಿ.ಎಸ್)

## ಮಧ್ಯಂತರ ಅರ್ಜಿ ಸಂಖ್ಯೆ 8 ಮತ್ತು 9 ರ ಮೇಲೆ ಆದೇಶ

1ನೇ ಎದುರುದಾರ/ಅರ್ಜಿದಾರನು ಈ ಮಧ್ಯಂತರ ಅರ್ಜಿ ಸಂಖ್ಯೆ 8 ಮತ್ತು 9ನ್ನು ಸಿ. ಪ್ರ. ಸಂ. ಆದೇಶ 6 ನಿಯಮ 17 ರ ಅಡಿಯಲ್ಲಿ ಸಲ್ಲಿಸಿ, ಎರದು ಪ್ರಕರಣಗಳ ತನ್ನ ತಕರಾರುಗಳನ್ನ ತಿದ್ದುಪಡಿಗೆ ಅನುಮತಿಸಬೇಕೆಂದು ಕೋರಿರುತ್ತಾನೆ.

2. 1ನೇ ಎದುರುದಾರ/ಅರ್ಜಿದಾರ ಈ ಮಧ್ಯಂತರ ಅರ್ಜಿಗಳನ್ನು ತನ್ನ ಪ್ರಮಾಣಪತ್ರಗಳೊಂದಿಗೆ ಸಲ್ಲಿಸಿ ಅವುಗಳಲ್ಲಿ ವಿವರವಾದ ಕಾರಣಗಳನ್ನು ಹೇಳಿ ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಗಳನ್ನು ಪುರಸ್ಕರಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾನೆ.

3. ಈ ಮಧ್ಯಂತರ ಅರ್ಜಿಗಳಿಗೆ ಅರ್ಜಿದಾರರು ತಕರಾರು ಇಲ್ಲವೆಂದು ಹೇಳಿರುತ್ತಾರೆ ಆದರೆ 2ನೇ ಎದುರುದಾರ ಮಾತ್ರ ತಕರಾರನ್ನು ಸಲ್ಲಿಸಿ ಅದರಲ್ಲಿ ವಿವರವಾದ ಕಾರಣಗಳನ್ನು ಹೇಳಿ, ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಗಳನ್ನು ವಜಾಗೊಳಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾರೆ.

4. ಅರ್ಜಿದಾರರ ಮತ್ತು ಎದುರುದಾರರ ಪರ ವಕೀಲರ ವಾದ ವಿವಾದವನ್ನು ಆಲಿಸಲಾಯಿತು.

5, ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ-

ಅಂಶ-1 - 1ನೇ ಎದುರುದಾರ/ಅರ್ಜಿದಾರ ಈ ಮಧ್ಯಂತರ ಅರ್ಜಿಗಳಲ್ಲಿ ಕೋರಿರುವಂತೆ ಉದ್ದೇಶಿತ ತಿದ್ದುಪಡಿಯು ಉಭಯ ಪಕ್ಷಗಾರರ ನಡುವೆ ವಿವಾದದಲ್ಲಿರುವ ನಿಜವಾದ ಪ್ರಶ್ನೆಗಳನ್ನು ನಿರ್ಧರಿಸಲು ಅವಶ್ಯವಾಗಿರುತ್ತದೆ ಎನ್ನುವುದನ್ನು ತೋರಿಸಿದ್ದಾರೆಯೇ?

ಅಂಶ-2 - ಯಾವ ಆದೇಶ?

6. ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆ:-

ಅಂಶ-1 - ಸಕಾರಾತ್ಮಕ

ಅಂಶ-2 - ಅಂತಿಮ ಆದೇಶದಂತೆ:

ಕಾರಣಗಳು

7. ಅಂಶ-1- ಅರ್ಜಿದಾರರು ತಮ್ಮ ಅರ್ಜಿಗಳಲ್ಲಿ ದಿನಾಂಕ 11-06-2015 ರಂದು ಮೋಟರ್ ವಾಹನ ಪ್ರಕರಣ ಸಂಖ್ಯೆ 695/2016 ರ ಅರ್ಜಿದಾರನು ತನ್ನ ಕೆ.ಎ-17 ಇ.ಹೆಚ್ -1908 ಬಜಾಜ್ ಡಿಸ್ಕವರ್ ಮೋಟರ್ ಬೈಕಿನಲ್ಲಿ ಮೋಟರ್ ವಾಹನ ಸಂಖ್ಯೆ 25/16 ರಲ್ಲಿನ 1 ನೇ ಅರ್ಜಿದಾರನ ಹೆಂಡತಿ ಮೃತ ದುರ್ಗಾಬಾಯಿ ಇವರನ್ನು ಕೊಡಿಸಿಕೊಂಡು ಹರಿಹರಕ್ಕೆ ಬರುತ್ತಿರುವಾಗ ಮಧ್ಯಾಹ್ನ 12-05 ಗಂಟೆ ಸುಮಾರಿಗೆ ಹರಿಹರ-ಹರಪ್ಪನಹಳ್ಳಿ ಇಂಡಸ್ಟ್ರೀಯಲ್ ಎಸ್ಟೇಟ್ ಗೇಟ್ ಮುಂಭಾಗದ ರಸ್ತೆಯಲ್ಲಿ ಹೋಗುತ್ತಿರುವಾಗ 1 ನೇ ಎದುರುದಾರನು ಹರಿಹರದ ಕಡೆಯಿಂದ ಹರಪನಹಳ್ಳಿಯ ಕಡೆಗೆ ತನ್ನ ಬಾಬ್ತು ಕೆ.ಎ-17 ಬಿ-7999 ನೇ ಟ್ಯಾಂಕರ್ ಲಾರಿಯನ್ನು ಅತೀ ವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಕೆ.ಎ-17 ಇ.ಹೆಚ್-1908 ನೇ ಮೋಟರ್ ಬೈಕಿಗೆ ಡಿಕ್ಕಿಪಡಿಸಿ ಅಪಘಾತವನ್ನು ಪಡಿಸಿದ್ದರಿಂದ ಮೋಟರ್ ವಾಹನ ಸಂಖ್ಯೆ 695/2016 ರ ಅರ್ಜಿದಾರನು ಗಾಯಗೊಂಡಿದ್ದು ಹಾಗೂ ಮೋಟರ್ ವಾಹನ ಪ್ರಕರಣ ಸಂಖ್ಯೆ 25/2016 ರ 1 ನೇ ಆರ್ಜಿದಾರನ ಹೆಂಡತಿ ದುರ್ಗಾಬಾಯಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾಳೆ ಎಂದು ಆರೋಪಿಸಿರುತ್ತಾರೆ. ಆದರೆ 1 ನೇ ಎದುರುದಾರ ತನ್ನ ತಕರಾರುಗಳಲ್ಲಿ ಅರ್ಜಿಗಳಲ್ಲಿ ಆರೋಪಿಸಿರುವ ಅಂಶಗಳು ಸುಳ್ಳು ಎಂದು ಅಲ್ಲಗಳೆದು ಅನವಶ್ಯಕ ಪಕ್ಷಗಾರರ ಸೇರ್ಪಡೆಯಿಂದ ಅರ್ಜಿಗಳು ಊರ್ಜಿತವಾಗಿರುವುದಿಲ್ಲವೆಂದು ಮತ್ತು 2 ನೇ ಎದುರುದಾರರ ಬಳಿ ತನ್ನ ಲಾರಿ ಕೆಎ-17 ಬಿ 7999 ವಿಮೆಗೆ ಒಳಪಟ್ಟಿದ್ದು ಅಪಘಾತದ ಸಮಯದಲ್ಲಿ ವಿಮೆಯು

ಚಾಲ್ತಿಯಲ್ಲಿರುತ್ತದೆ ಎಂದು ತನ್ನ ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾನೆ. ಆದರೆ 2ನೇ ಎದುರುದಾರರು ತಮ್ಮ ತಕರಾರುಗಳಲ್ಲಿ ಟ್ಯಾಂಕರ್ ಲಾರಿ ನೊಂದಣಿ ಸಂಖ್ಯೆ ಕೆಎ-17 ಬಿ 7999 ರ ಚಾಲಕನು ಅಪಘಾತದ ಸಮಯದಲ್ಲಿ ಅದನ್ನು ಚಲಾಯಿಸಲು ಮಾನ್ಯವಾದ ವಾಹನ ಚಾಲನ ಪರವಾನಿಗೆಯನ್ನು ಹೊಂದಿರಲಿಲ್ಲ ಮತ್ತು ಮೋಟಾರ್ ಸೈಕಲ್ ನೊಂದಣಿ ಸಂಖ್ಯೆ ಕೆಎ-17 ಇ ಹೆಚ್ 1908 ರ ಚಾಲಕನು ಅತಿವೇಗ ಮತ್ತು ಅಲಕ್ಷತನದಿಂದ ಚಲಾಯಿಸಿದ್ದರಿಂದ ಅಪಘಾತವಾಗಿರುತ್ತದೆ ಎಂದು ತಮ್ಮ ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾರೆ.

8. 1 ನೇ ಎದುರುದಾರ/ಅರ್ಜಿದಾರನು ಈ ಮಧ್ಯಂತರ ಅರ್ಜಿಗಳನ್ನು ಸಲ್ಲಿಸುವುದರ ಮೂಲಕ ತನ್ನ ತಕರಾರುಗಳಲ್ಲಿ ಲಾರಿಯಲ್ಲಿ ಮೊಲ್ಯಾಸಸ್‌ನ್ನು ಮೆಸರ್ಸ ದಾವಣಗೆರೆ ಶುಗರ್ಸ ಕಂ. ಲಿಮಿಟೆಡ್ ಕುಕ್ಕುವಾಡ, ದಾವಣಗೆರೆ ಜಿಲ್ಲೆಯಿಂದ ಶ್ಯಾಮನೂರು ಶುಗರ್ಸ ಲಿಮಿಟೆಡ್ ದುಗ್ಗಾವತಿ ಹರಪನಹಳ್ಳಿ ತಾಲ್ಲೂಕಾ, ದಾವಣಗೆರೆ ಜಿಲ್ಲೆಗೆ ತೆಗೆದುಕೊಂಡು ಹೊರಟಿದ್ದ ಎನ್ನುವುದನ್ನು ಸೇರ್ಪಡೆಗೊಳಿಸಲು ತಕರಾರುಗಳನ್ನು ತಿದ್ದುಪಡೆಗೆ ಅನುಮತಿಸಬೇಕು ಎಂದು ಕೋರಿರುತ್ತಾನೆ ಹಾಗೂ 1ನೇ ಎದುರುದಾರರ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ ಸದರಿ ಲಾರಿಯಲ್ಲಿ ಮೊಲ್ಯಾಸಸ್‌ನ್ನು ಮೆಸರ್ಸ ದಾವಣಗೆರೆ ಶುಗರ್ಸ ಕಂ. ಲಿಮಿಟೆಡ್ ಕುಕ್ಕುವಾಡ, ದಾವಣಗೆರೆ ಜಿಲ್ಲೆಯಿಂದ ಶ್ಯಾಮನೂರು ಶುಗರ್ಸ ಲಿಮಿಟೆಡ್ ದುಗ್ಗಾವತಿ ಹರಪನಹಳ್ಳಿ ತಾಲ್ಲೂಕಾ, ದಾವಣಗೆರೆ ಜಿಲ್ಲೆಗೆ ತೆಗೆದುಕೊಂಡು ಹೊರಟಿದ್ದ ಸದರಿ ವಿಷಯವನ್ನು ತಕರಾರುಗಳಲ್ಲಿ ಈ ಹಿಂದೆ ಹೇಳಿರಲಿಲ್ಲ ಮತ್ತು ಅದು ಇತ್ತೀಚೆಗೆ 1ನೇ ಎದುರುದಾರನ ತಿಳುವಳಿಕೆಗೆ ಬಂದಿರುತ್ತದೆ ಆದ್ದರಿಂದ ಉದ್ದೇಶಿತ ತಿದ್ದುಪಡೆ ಅವಶ್ಯವಾಗಿದ್ದು ಈ ಮಧ್ಯಂತರ ಅರ್ಜಿಗಳನ್ನು ಪುರಸ್ಕರಿಸುವುದರಿಂದ ಎದುರುದಾರರಿಗೆ ಯಾವುದೇ ರೀತಿ ನಷ್ಟ ಹಾಗೂ ಅನ್ಯಾಯ ಉಂಟಾಗುವುದಿಲ್ಲ ಎಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ. ಆದರೆ 2ನೇ ಎದುರುದಾರರ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ ಅರ್ಜಿದಾರರೊಂದಿಗೆ

ಮಿಲಾಪೆಯಾಗಿ 1 ನೇ ಎದುರುದಾರನು ತನ್ನ ತಕರಾರುಗಳನ್ನು ಸಲ್ಲಿಸಿರುತ್ತಾನೆ ಹಾಗೂ ಈಗಾಗಲೇ ಅರ್ಜಿದಾರರ ಪರ ಪಿಡಬ್ಲೂ 1 ರಿಂದ 4 ರವರ ಸಾಕ್ಷಿ ವಿಚಾರಣೆ ಯಾಗಿರುವುದರಿಂದ ಮತ್ತು ಉದ್ದೇಶಿತ ತಿದ್ದುಪಡೆಗೆ ಅನುಮತಿಸುವುದರಿಂದ ಪ್ರಕರಣಗಳ ಸ್ವರೂಪ ಬದಲಾವಣೆಗೊಳ್ಳುತ್ತದೆ ಕೇವಲ 2ನೇ ಎದುರುದಾರರಿಗೆ ತೊಂದರೆ ಕೊಡುವ ಸಲುವಾಗಿ ಈ ರೀತಿ ಮಧ್ಯಂತರ ಅರ್ಜಿಗಳನ್ನು 1ನೇ ಎದುರುದಾರ ಸಲ್ಲಿಸಿರುತ್ತಾನೆ ಆದ್ದರಿಂದ ಈ ಮಧ್ಯಂತರ ಅರ್ಜಿಗಳನ್ನು ವಜಾಗೊಳಿಸಬೇಕು ಎಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

9. ಎರಡು ಪ್ರಕರಣಗಳ ಅರ್ಜಿದಾರರು ತಮ್ಮ ಅರ್ಜಿಗಳಲ್ಲಿ ಸದರಿ ಲಾರಿಯಲ್ಲಿ ಏನು ತುಂಬಿಕೊಂಡು 1 ನೇ ಎದುರುದಾರ ಹೊರಟಿದ್ದ ಎಂದು ಹೇಳಿಲ್ಲ ಅಲ್ಲದೇ 1ನೇ ಎದುರುದಾರನು ತನ್ನ ತಕರಾರುಗಳಲ್ಲಿ ಸದರಿ ಲಾರಿಗಳಲ್ಲಿ ಏನು ತುಂಬಿಕೊಂಡು ಹೊರಟಿತ್ತು ಎಂದು ಹೇಳಿಲ್ಲ ಹಾಗೂ 2 ನೇ ಎದುರುದಾರರು ಸಹ ತಮ್ಮ ತಕರಾರುಗಳಲ್ಲಿ ಸದರಿ ಲಾರಿಯಲ್ಲಿ ಏನು ತುಂಬಿಕೊಂಡು ಹೊರಟಿದ್ದ ಎಂದು ಹೇಳಿಲ್ಲ ಅಲ್ಲದೇ ನಿಪಿ 1 ಪ್ರಥಮ ವರ್ತಮಾನ ವರದಿ, ನಿಪಿ 2 ಪಿರ್ಯಾದಿ, ನಿಪಿ 3 ಸ್ಥಳ ಪಂಚನಾಮೆ ಹಾಗೂ ನಿಪಿ 4 ಅಂತಿಮ ವರದಿಯಲ್ಲಿ ಸಹ ಸದರಿ ಲಾರಿಯಲ್ಲಿ ಏನನ್ನೂ ತುಂಬಿಕೊಂಡು ಹೊರಟಿದ್ದ ಎಂದು ಹೇಳಿಲ್ಲ ಆದ್ದರಿಂದ ಉಭಯ ಪಕ್ಷಗಾರರ ಮಧ್ಯ ವಿವಾದದಲ್ಲಿರುವಂತಹ ಎಲ್ಲಾ ಪ್ರಶ್ನೆಗಳನ್ನು ಪರಿಣಾಮಕಾರಿಯಾಗಿ ಹಾಗೂ ಅಂತಿಮವಾಗಿ ನ್ಯಾಯ ನಿರ್ಣಯಿಸುವ ಸಲುವಾಗಿ ಸದರಿ ಲಾರಿಯಲ್ಲಿ ಏನನ್ನೂ ತುಂಬಿಕೊಂಡು ಹೊರಟಿದ್ದ ಎಂದು ತಕರಾರುಗಳನ್ನು ತಿದ್ದುಪಡೆ ಮಾಡಿ ಅದರಲ್ಲಿ ಸೇರ್ಪಡೆಗೊಳಿಸುವುದರಿಂದ ಸಾಧ್ಯವಾಗುತ್ತದೆ ಹಾಗೂ ಯಾರು ಅರ್ಜಿದಾರರಿಗೆ ಪರಿಹಾರ ಕೊಡಲು ಬಾಧ್ಯಸ್ಥರು ಎನ್ನುವ ನಿರ್ಣಯಕ್ಕೆ ಈ ನ್ಯಾಯಾಲಯ ಬರಲು ಉದ್ದೇಶಿತ ತಿದ್ದುಪಡೆಗೆ ಅನುಮತಿಸುವುದು ಅವಶ್ಯವಾಗಿರುತ್ತದೆ ಅಲ್ಲದೇ ಉದ್ದೇಶಿತ ತಿದ್ದುಪಡೆಯಿಂದ ಪ್ರಕರಣಗಳ ಸ್ವರೂಪ ಮತ್ತು ವ್ಯಾಜ್ಯ ಕಾರಣ ಬದಲಾವಣೆಗೊಳ್ಳುವುದಿಲ್ಲ ಅಲ್ಲದೇ ಉದ್ದೇಶಿತ ತಿದ್ದುಪಡೆಗೆ

ಅನುಮತಿಸುವುದರಿಂದ 2 ನೇ ಎದುರುದಾರರಿಗೆ ಯಾವುದೇ ರೀತಿ ನಷ್ಟ ಹಾಗೂ ಅನ್ಯಾಯ ಉಂಟಾಗುವುದಿಲ್ಲ ಅಲ್ಲದೇ ಕಾನೂನು ಹಾಗೂ ನ್ಯಾಯದ ಹಿತದೃಷ್ಟಿಯಿಂದಲೂ ಸಹ ಉದ್ದೇಶಿತ ತಿದ್ದುಪಡಿಗೆ ಅನುಮತಿಸುವುದು ಅವಶ್ಯವಾಗಿರುತ್ತದೆ ಆದ್ದರಿಂದ 1 ನೇ ಎದುರುದಾರ/ಅರ್ಜಿದಾರನು ಈ ಮಧ್ಯಂತರ ಅರ್ಜಿಗಳಲ್ಲಿ ಕೋರಿರುವಂತೆ ಉದ್ದೇಶಿತ ತಿದ್ದುಪಡಿಗೆ ಅನುಮತಿಸಲು ಇರುವಂತಹ ಕಾರಣಗಳನ್ನು ತೋರಿಸಿರುತ್ತಾನೆ. ಕಾರಣ ಈ ಮಧ್ಯಂತರ ಅರ್ಜಿಗಳಲ್ಲಿ ಕೋರಿರುವಂತೆ ಉದ್ದೇಶಿತ ತಿದ್ದುಪಡಿಗೆ ಅನುಮತಿಸುವುದು ಅವಶ್ಯವಾಗಿರುತ್ತದೆ ಎಂದು ತೀರ್ಮಾನಿಸಿ ಅಂಶ 1 ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

10. ಅಂಶ-2 – ಮೇಲಿನ ಅಂಶದಲ್ಲಿ ಚರ್ಚಿಸಲಾದ ಕಾರಣಗಳಿಂದಾಗಿ ಈ ಕೆಳಕಂಡಂತೆ ಮಾಡಿದಃ

## ಆದೇಶ

1ನೇ ಎದುರುದಾರ/ಅರ್ಜಿದಾರ ಸಿ. ಪ್ರ. ಸಂ. ಆದೇಶ 6 ನಿಯಮ 17 ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-8 ಮತ್ತು 9ನ್ನು 200 ರೂ ಖರ್ಚಿನ ಮೇಲೆ ಪುರಸ್ಕರಿಸಲಾಗಿದೆ.

1ನೇ ಎದುರುದಾರನು ತನ್ನ ತಕರಾರುಗಳನ್ನು ಮುಂದಿನ ಸುನಾವಣೆಯ ದಿನಾಂಕದ ಒಳಗೆ ತಿದ್ದುಪಡಿ ಮಾಡಬೇಕೆಂದು ನಿರ್ದೇಶಿಸಿ ಆದೇಶಿಸಿದೆ.

(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರು ಗಣಕಯಂತ್ರದಲ್ಲಿ ನೇರವಾಗಿ ಬೆರಳಚ್ಚು ಮಾಡಿದ ನಂತರ ಅದನ್ನು ಓದಿ, ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ ಇಂದು ದಿನಾಂಕ 21ನೇ ಮೇ- 2020 ರಂದು ನ್ಯಾಯಾಲಯದ ಕಛೇರಿಯಲ್ಲಿ ವಾಟ್ಸಪ್ ವೀಡಿಯೋ ಕಾನ್ಫರೆನ್ಸ ಮೂಲಕ ಘೋಷಿಸಲಾಯಿತು)

(ವೈ. ಕೆ. ಬೇನಾಳ)

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಹರಿಹರ.